ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್
ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

---

ಹರಿಹರ/ ಮಾಹಿತಿಹಕ್ಕು/ ಮಾಹಿತಿ/ಅಂತರ್ಜಾಲ/ 2013 188 ದಿ: 13-06-2013

ಗೆ:

ಪ್ರಧಾನ ವ್ಯವಸ್ಥಾಪಕರು(ಆಡಳಿತ & ಭೂಸ್ವಾಧೀನ)
ಕ.ರಾ.ಸ.ಕೈ.ಅ.ನಿ.ನಿಯಮಿತ,
ಕೈಗಾರಿಕಾ ವಸಾಹತು, ರಾಜಾಜಿನಗರ,
ಬೆಂಗಳೂರು-10.

ಮಾನ್ಯರೆ,

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005 ರಡಿಯಲ್ಲಿ ,ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸುವ ಬಗ್ಗೆ

ಉಲ್ಲೇಖ: 1) ತಮ್ಮ ಸುತ್ತೋಲೆ ಸಂಖ್ಯೆ 217 ದಿ: 15-04-2013.
2) ಈ ಕಛೇರಿ ಪತ್ರ ದಿ: 07-06-2013.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಾವಣಗೆರ ವಿಭಾಗೀಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಮಳಿಗೆ / ನಿವೇಶನಗಳ ಕಡತಗಳನ್ನು ಕ್ರಮಬದ್ಧ ವರ್ಗೀಕರಣ ಹಾಗೂ ಸೂಚಿಕರಣ ಪಟ್ಟಿಯನ್ನು ತಯಾರಿಸಿ ಮಾಹಿತಿಹಕ್ಕು ಅಧಿನಿಯಮ 4 (1) ಬಿ ಕಾಯ್ದೆಯ ನಿಗದಿಪಡಿಸಿರುವ ಎಲ್ಲಾ ಅಂಶಗಳ ಅಡಿಯಲ್ಲಿ ಮಾಹಿತಿಯನ್ನು ಸಿದ್ಧಪಡಿಸಿ ಉಲ್ಲೇಖ(2) ರಲ್ಲಿ ಈಗಾಗಲೇ ಸಲ್ಲಿಸಲಾಗಿದೆ. ಮತ್ತೊಮ್ಮೆ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ಅಡಕ: ತ:ಶ್ರೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
15 JUN 2012
ಬೆಂಗಳೂರು-560 010
ಸಂಖ್ಯೆ.......................

ತಮ್ಮ ವಿಶ್ವಾಸಿ,

13/6/13

ವ್ಯವಸ್ಥಾಪಕರು(ಕೈವ)
ಕ.ರಾ.ಸ.ಕೈ.ಅ.ನಿ.ನಿಯಮಿತ,
ದಾವಣಗೆರೆ ವಿಭಾಗ, ಕೈವ, ಹರಿಹರ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
15 MAY 2012
ಬೆಂಗಳೂರು-560 010
ಸಂಖ್ಯೆ.........930.........

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

**ದಾವಣಗೆರೆ ವಿಭಾಗ, ಕೈಗಾರಿಕಾ ವಸಾಹತು, ಹರಿಹರ**

ಮಾಹಿತಿ ಹಕ್ಕು ಅಧಿನಿಯಮ ವಿಧಿ 4(1(ಬಿ) ಅಡಿ ಕೆ.ಎಸ್.ಎಸ್.ಐ.ಡಿ.ಸಿ. ದಾವಣಗೆರೆ ವಿಭಾಗೀಯ ಕಚೇರಿಯ ಮಾಹಿತಿ

**i.. ಆದರ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು :-**

ದಾವಣಗೆರೆ ವಿಭಾಗೀಯ ಕಚೇರಿಯು ದಿನಾಂಕ 1998 ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ.

**ಅ). ರಚನೆ: ದಾವಣಗೆರೆ ವಿಭಾಗೀಯ ಕಚೇರಿಯ ಅಧಿಕಾರಿ ವರ್ಗದ ವಿವರ ಈ ಕೆಳಗಿನಂತಿದೆ.**

ವ್ಯವಸ್ಥಾಪಕರು(ಕೈವ)

ಸಹಾಯಕ ವ್ಯವಸ್ಥಾಪಕರು(ಅ)

ಹಿರಿಯ ಸಹಾಯಕರು,

ಹಿರಿಯ ಸಹಾಯಕರು

ಕಿರಿಯ ಸಹಾಯಕರು

ಹಿರಿಯ ಆಜ್ಞಾಪಾಲಕರು

**ಆ). <u>ಕಾರ್ಯಗಳು ಮತ್ತು ಕರ್ತವ್ಯಗಳು:</u>**

1. ನಿಗಮವು ಸರ್ಕಾರದಿಂದ ಮತ್ತು ಕೆ.ಐ.ಎ.ಡಿ.ಬಿ. ಪ್ರಾಧಿಕಾರದಿಂದ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಜಮೀನುಗಳನ್ನು ಹಂಚಿಕೆ ಪಡೆದು ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿ ಮೂಲಭೂತ ಸೌಲಭ್ಯಗಳೊಂದಿಗೆ ಕೈಗಾರಿಕಾ ನಿವೇಶನಗಳು / ಮಳಿಗೆಗಳನ್ನು ನಿರ್ಮಿಸಿ ಅರ್ಹ ಉದ್ಯಮಿಗಳಿಗೆ ಹಂಚಿಕೆ ಮಾಡುವ ಮೂಲಕ ವಿದ್ಯಾವಂತ ಯುವಕ ಮತ್ತು ಯುವತಿಯರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವುದು ಮತ್ತು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಹಾಗು ಒಟ್ಟಾರೆ ರಾಜ್ಯದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವ ಮಹತ್ತರ ಕಾರ್ಯಗಳನ್ನು ನಿಗಮವು ನಿರ್ವಹಿಸಿಕೊಂಡು ಬರುತ್ತಿದೆ

2. ನಿಗಮವು ಕೈಗಾರಿಕಾ ಘಟಕಗಳಿಗೆ ಪೂರಕವಾದ C.R. Sheet, H.R. Sheet. Angles, M.S. Plate, Wire Rod, Rounds, Cement, P.Wax ಇತ್ಯಾದಿ ಗುಣಮಟ್ಟದ ಕಚ್ಚಾ ಸರಕುಗಳನ್ನು ಸಹ ಪೂರೈಸುವ ಕಾರ್ಯವನ್ನು ಸಹ ನಿರ್ವಹಿಸುತ್ತಿದೆ

3. ದಾವಣಗೆರೆ ವಿಭಾಗೀಯ ಕಚೇರಿ ವ್ಯಾಪ್ತಿಗೆ ದಾವಣಗೆರೆ ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳು ಒಳಪಡುತ್ತವೆ. ಈ ಎರಡು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳು ಮತ್ತು ಈ ವಸಾಹತುಗಳಲ್ಲಿ ನಿರ್ಮಿಸಿರುವ ಕೈಗಾರಿಕಾ ಮಳಿಗೆ ಹಾಗೂ ಅಭಿವೃದ್ಧಿ ಪಡಿಸಿರುವ ನಿವೇಶನಗಳ ವಿವರ ಈ ಕೆಳಗಿನಂತ್ತಿದೆ

ಮುಂದುವರೆದಿದೆ.....2

3. ಮಳಿಗೆ / ನಿವೇಶನ ಹಂಚಿಕೆ ಉಪ ಸಮಿತಿ ಸಭೆಯು, ಅರ್ಜಿದಾರರು ಸಲ್ಲಿಸಿರುವ ಅರ್ಜಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ ಕೆ.ಎಸ್.ಎಸ್.ಐ.ಡಿ.ಸಿ.ಯಲ್ಲಿ ಚಾಲ್ತಿಯಲ್ಲಿರುವ ಹಂಚಿಕೆ ನಿಯಮಾವಳಿಯಂತೆ ಈ ಕೆಳಕಂಡ ಮಾನದಂಡವನ್ನು ಅನುಸರಿಸಿ ಮಳಿಗೆ / ನಿವೇಶನ ಹಂಚಿಕೆಗೆ ಫಲಾನುಭವಿಗಳನ್ನು ಗುರುತಿಸಿ ಹಂಚಿಕೆಯ ನಿರ್ಧಾರಕ್ಕಾಗಿ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಭೆಗೆ ತನ್ನ ವರದಿಯನ್ನು ಮಂಡಿಸುತ್ತದೆ.

| ಕ್ರ. ಸಂ. | ಅಳವಡಿಸಿರುವ ಮಾನದಂಡ | ನಿಗದಿಪಡಿಸಿರುವ ಅಂಕಗಳು |
|---|---|---|
| 1. | ಅರ್ಜಿದಾರರು ಈಗಾಗಲೇ ಕೈಗಾರಿಕೆ ನಡೆಸುತ್ತಿದ್ದರೆ | 05 |
| 2. | ಮೊದಲ ಜನಾಂಗದ ಉದ್ದಮೆದಾರರಾಗಿದ್ದರೆ | 10 |
| 3 | ಅರ್ಜಿದಾರರು ತಾಂತ್ರಿಕ ವಿದ್ಯಾರ್ಹತೆ ಹೊಂದಿದ್ದರೆ | 15 |
| 4 | ಅರ್ಜಿದಾರರು ಸ್ಥಳೀಯ ಅಭ್ಯರ್ಥಿಯಾಗಿದ್ದರೆ | 10 |
| 5 | ಯೋಜನಾ ಬಂಡವಾಳ ಹೂಡಿಕೆಗೆ ಇರುವ ಸಾಮರ್ಥ್ಯ | 15 |
| 6 | ಉದ್ಯೋಗ ಸೃಷ್ಟಿ | 10 |
| 7 | ಉದ್ದೇಶಿತ ಉತ್ಪಾದನೆ | 10 |
| 8 | ಮಾಲಿನ್ಯ ರಹಿತ ಕೈಗಾರಿಕೆ ಆಗಿದ್ದರೆ | 10 |
| 9 | ಪರಿಶಿಷ್ಟ ಜಾತಿ / ಪಂಗಡದ ಅಭ್ಯರ್ಥಿಯಾಗಿದ್ದರೆ | 15 |
| | ಒಟ್ಟು ಅಂಕಗಳು | 100 |

4. ನಿಗಮದ ಮಳಿಗೆ / ನಿವೇಶನ ಹಂಚಿಕೆ ನಿಯಮಾವಳಿಯಂತೆ, ಪತ್ರಿಕಾ ಪ್ರಕಟಣೆಗೆ ಎದುರಾಗಿ ಒಂದೇ ಮಳಿಗೆ ಅಥವಾ ಒಂದೇ ನಿವೇಶನಕ್ಕೆ 06 ಮತ್ತು 06ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದ ಪಕ್ಷದಲ್ಲಿ, ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಭೆಯ ಗಮನಕ್ಕೆ ತಂದು ಅಂತಹ ಮಳಿಗೆ / ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲಾಗುತ್ತದೆ.

5. ಕೈಗಾರಿಕಾ ನೀತಿ ಅನುಷ್ಠಾನ, ಉತ್ತೇಜನ ಮತ್ತು ರಿಯಾಯಿತಿಗಳು:

1. ಘನ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಕೈಗಾರಿಕಾ ನೀತಿಯನ್ನು ಅನುಷ್ಠಾನಗೊಳಿಸುವುದು. _ಕೈಗಾರಿಕಾ ನೀತಿಯನ್ವಯ ಉದ್ಯಮಗಳಿಗೆ ದೊರೆಯುವ ಸೌಲಭ್ಯಗಳ ಕುರಿತು ಉದ್ಯಮಿದಾರರಿಗೆ ಮಾಹಿತಿ ಒದಗಿಸುವುದು.

2. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅರ್ಜಿದಾರರಿಗೆ ಅರ್ಜಿ ಪರಿಶೀಲನಾ ಶುಲ್ಕದಲ್ಲಿ ಶೇಕಡ 50ರಷ್ಟು ರಿಯಾಯಿತಿ ನೀಡಲಾಗುತ್ತದೆ.

3. ಪರಿಶಿಷ್ಟ ಜಾತಿ / ಪಂಗಡದ ಹಂಚಿಕೆದಾರರಿಗೆ ರೂ. 5.00 ಲಕ್ಷ ಮಿತಿಗೊಳಪಟ್ಟು ಮಳಿಗೆ / ನಿವೇಶನದ ಮೌಲ್ಯದಲ್ಲಿ ಶೇಕಡ 40ರಷ್ಟು ಸಹಾಯಧನ ನೀಡಲಾಗುತ್ತದೆ.

4. ಪರಿಶಿಷ್ಟ ಜಾತಿ / ಪಂಗಡದ ಅರ್ಜಿದಾರರಿಗೆ ನಾಮಾಂಕಿತ / ಉತ್ಪನ್ನ ಬದಲಾವಣೆ ಶುಲ್ಕದಲ್ಲಿ ಶೇಕಡ 50ರಷ್ಟು ರಿಯಾಯಿತಿ ನೀಡಲಾಗುತ್ತದೆ.

5. ಮಳಿಗೆ / ನಿವೇಶನ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಶೇಕಡ 17 ರಷ್ಟು, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇಕಡ 5.5 ರಷ್ಟು, ಅಲೆಮಾರಿ ಜನಾಂಗದವರಿಗೆ ಶೇಕಡ 2 ರಷ್ಟು, ಅಂಗವಿಕಲರಿಗೆ ಶೇಕಡ 3 ರಷ್ಟು ಹಾಗು ಒಟ್ಟಾರೆ ಹಂಚಿಕೆಯಲ್ಲಿ ಶೇಕಡ 30 ರಷ್ಟು ಮಹಿಳಾ ಉದ್ಯಮಿದಾರರಿಗೆ ಮೀಸಲಾತಿ ಅನುಸರಿಸಲಾಗುತ್ತಿದೆ.

*ಮುಂದುವರೆದಿದೆ.....4*